ದೈನಂದಿನ ಬದುಕು ಕೊರೊನಾ ರೋಗಾಣುವಿನ ಭೀತಿಯ ಕಾರಣದಿಂದಾಗಿ ಅಸ್ತವ್ಯಸ್ತಗೊಂಡಿದೆ. ನಮ್ಮ ಅಗತ್ಯಗಳನ್ನು ಸೀಮಿತಗೊಳಿಸಿಕೊಳ್ಳುವುದರ ಜೊತೆಗೆ, ಸ್ವಯಂ ನಿರ್ಬಂಧ ವಿಧಿಸಿಕೊಂಡು ಜೀವನ ನಡೆಸಬೇಕಾದ ಸಂದರ್ಭ ಇಂದಿನದು. ಬೇರೆಲ್ಲಕ್ಕೂ ಅಡೆತಡೆಯಿರಬಹುದು. ಆದರೆ, ಮನೆಯವರೊಟ್ಟಿಗೆ ಉಲ್ಲಾಸದಿಂದಿರಲು, ನಮ್ಮಷ್ಟಕ್ಕೆ ನಾವು ನಗಲು ಎಲ್ಲಿಯ ನಿರ್ಬಂಧ? ಈ ಕ್ಷೋಭೆಯ ಕಾಲದಲ್ಲಿ ನಗು ಜೀವನಕ್ಕೆ ಅಗತ್ಯವಾದ ಟಾನಿಕ್ ಕೂಡ ಹೌದು. ಏಪ್ರಿಲ್ 1ರ ಆಸುಪಾಸಿನ ಸಂಚಿಕೆಯನ್ನು 'ಸುಧಾ' ಹಲವು ವರ್ಷಗಳಿಂದ ಹಾಸ್ಯ ವಿಶೇಷವಾಗಿ ರೂಪಿಸುತ್ತಿದೆ. ಆ ಪರಂಪರೆಯ ಭಾಗವಾಗಿರುವ ಈ ಸಂಚಿಕೆಯಲ್ಲಿ ನಸುನಗೆಯ ಸಾಮಗ್ರಿ ಪ್ರಧಾನವಾಗಿದೆ. ಕೊರೊನಾ ಬೇಗೆ ಮರೆತು ನಸುನಗಲು ಇಲ್ಲಿದೆ ನಗೆಮದ್ದು.

—ಸಂಪಾದಕ

ದಡದಡದಡದಡದಡನೇ ಬಂದವರೇ ಸರಕ್ಕನೇ ಚೇರು ಎಳೆದುಕೊಂಡು ನನ್ನೆದುರು ಕೂತು ಬಿಟ್ಟರು. ನಾನಿನ್ನೂ ಅವಕ್ಕಾಗಿ ಕೂತಿರುವಾಗಲೇ ನನ್ನ ಕೈಯೆಳೆದುಕೊಂಡು ಶೇಕ್ ಮಾಡಿ, 'ಹೇಳಿ' ಎಂದು ವಿನಮ್ರ ಮುಖಭಾಗದಲ್ಲಿ ಕೈಕಟ್ಟಿ ಕೂತುಬಿಟ್ಟರು. ಆ ಕ್ಷಣ ನನಗೆ ನಾನು ತಯಾರು ಮಾಡಿಕೊಂಡು ಬಂದಿದ್ದ ಪ್ರಶ್ನೆಗಳೆಲ್ಲ ಮರೆತುಹೋಗಿಬಿಟ್ಟಿದ್ದವು. 'ಸರ್, ನಿಮ್ಮನ್ನು ಇಷ್ಟು ಹತ್ತಿರದಿಂದ ನೋಡ್ತಿರೋ ಎಕ್ಸೈಟ್ಮೆಂಟ್‌ನಲ್ಲಿ ಮಾತೇ ಹೊರಡ್ತಿಲ್ಲ.. ಸ್ವಲ್ಪ ಸುಧಾರಿಸ್ಕೊಳ್ಳೋಕೆ ಟೈಮ್ ಕೊಡಿ' ಎಂದು ಕೇಳಿದೆ. ದರ್ಶನ್ 'ಓಹ್' ಎಂದು ಚಿತ್ರವಿಚಿತ್ರವಾಗಿ ಧ್ವನಿ ಹೊರಡಿಸಿ ಒಮ್ಮೆ ಕೈಯೆತ್ತಿ ಮುಗಿದರೋ ಆಶೀರ್ವಾದ ಮಾಡಿದರೋ ಗೊತ್ತಾಗದ ಹಾಗೆ ಆಡಿಸಿ ಮತ್ತೆ ಮೊದಲಿನದೇ ಪೊಜಿಷನ್‌ಗೆ ಬಂದು ಕೂತರು. ನಮ್ಮ ಮುಂದಿನ ಮಾತುಕತೆಯನ್ನು ಸಂದರ್ಶನ ಎಂದು ಹೇಳಲಾಗಲಿ, ಪ್ರಶ್ನೋತ್ತರ ಎಂದು ಉಲ್ಲೇಖಿಸಲಾಗಲಿ ನನಗೆ ಪೂರ್ತಿ ಧೈರ್ಯ ಇಲ್ಲ. ಹಾಗಾಗಿ ಅಲ್ಲಿನ ಮಾತುಗಳನ್ನು ಹಾಗ್ಹಾಗೆಯೇ ನಿಮ್ಮಮುಂದೆ ಇಡುತ್ತಿದ್ದೇನೆ. ಅದು ಏನೆಂದು ನೀವೇ ನಿರ್ಧರಿಸಿ.

◆ **ಸರ್, ನಾನು 'ಸುಧಾ' ವಾರಪತ್ರಿಕೆಯಿಂದ ಬಂದಿದೀನಿ... ನಮ್ಮ ಪತ್ರಿಕೇಲಿ ನಿಮ್ಮದೊಂದು ಎಕ್ಸ್‌ಕ್ಲೂಸಿವ್ ಸಂದರ್ಶನ ಮಾಡ್ಬೇಕು ಅಂದ್ಕೊಂಡಿದೀವಿ**

ನೋಡಿ ಸಾರ್ ಫಸ್ಟೇ ಹೇಳ್ಬಿಡ್ತೀನಿ ನೀವು ಸುಧಾದಿಂದ್ಲೇ ಬನ್ನಿ ಎನ್‌ಡಿಟಿವಿಯಿಂದ್ಲೇ ಬನ್ನಿ ನಾನು ಆಡೋದು ಅದೇ ಮಾತು ಈಗ ನಿಮ್ಮತ್ರ ಒಂದ್ ಮಾತು. ಮತ್ತೊಬ್ರು ಬೇರೆ ಕಡೆಯಿಂದ ಬಂದಿದಾರೆ ಅಂತ ಅವ್ರತ್ರ ಇನ್ನೊಂದ್ ಮಾತು ಊಹೂ... ಕೇಳ್ಲೇ ಬೇಡಿ ಏನಕ್ಕೆ ಅಂದ್ರೆ ನಾನು ಇರೋದೆ ಹಿಂಗೆ.

◆ **ಸರಿ ಸರ್ ನಿಮ್ಮದೊಂದು ಸ್ಪೆಷಲ್ ಇಂಟರ್ ವ್ಯೂ...**

ಸ್ಪೆಷಲ್ ಗಿಷೆಲ್ ಎಲ್ಲ ಏನೂ ಇಲ್ಲ ಈವತ್ ಈ ದರ್ಶನ್ ಸ್ಪೆಷಲ್. ನಾಳೆ ಇನ್ನೊಬ್ಬ ಯಾರೋ ಸ್ಪೆಷಲ್. ಅವೆಲ್ಲ ಸುಳ್ಳು ಹೆಂಗಿದೆ ಹಾಗೆ ಮಾಡ್ಕೋಂತಾ ಹೋಗ್ತಿರ್ಬೇಕು ಅಷ್ಟೆ... ಅದೇ ನನ್ ಪಾಲಿಸಿ.

◆ **ಹಾ ಸರ್ ನಿಮ್ಮ ಬಾಲ್ಯದ ಬಗ್ಗೆ**

ಬಾಲ್ಯ ಗಿಲ್ಯ ಎಲ್ಲ ಬೇಡ... ನನ್ನ ಬಾಲ್ಯ, ಯೌವನ, ಅದು ಇದು ಎಲ್ಲ ಡಿಟೈಲಾಗಿ ಎರಡು ಎಪಿಸೋಡಲ್ಲಿ 'ವೀಕೆಂಡ್ ವಿತ್ ರಮೇಶ್'ದಲ್ಲಿ ಹೇಳಿ ಮುಗ್ಸಿದೀನಿ ಜನ ಅದ್ನೇ ನೋಡ್ಕೋತಾರೆ ಮತ್ತೆ ಮತ್ತೆ ಯಾಕ್ ಮಾತಾಡೋದು..

◆ **ಹಾಗಲ್ಲ ಸರ್... ನಿಮ್ಮ ಚಿಕ್ ವಯಸ್ಸಲ್ಲಿ ಹೇಗಿದ್ರಿ... ಏನ್ ಮಾಡ್ತಿದ್ರಿ ತುಂಟ ಆಗಿದ್ರಾ...**

ನೋಡಿ ನಾನ್ ಹೇಳ್ತಿರೋದೇ ಅರ್ಥ ಮಾಡ್ಕೋಂತಿಲ್ಲ ಅಂದ್ಮೇಲೆ ನಾನ್ಯಾಕೆ ನಿಮಗೆ ಇಂಟರ್ ವ್ಯೂ ಕೊಡ್ಬೇಕು ಹೇಳಿ? ಇದೇ ಇದೇ ನಂಗೆ ಆಗಲ್ಲ, ಅದೆಲ್ಲ ಬೇಡ. ಬೇರೆ ಏನಾದರೂ ಕೇಳಿ ಅಂತ ಹೇಳ್ದೆ ತಾನೆ? ಸರಿ... ನಾನು ಬಾಲ್ಯದಲ್ಲಿ ಫುಲ್ ಕಿಲಾಡಿ ಆಗಿದ್ದೆ ನಮ್ ಹುಡುಗ್ರ ತಲೇನೆಲ್ಲ ಒಡ್ದಾಕ್ತಿದ್ದೆ ಸಮಾಧಾನಾನಾ? ಬರ್ಕೊಳ್ಳಿ...

◆ **ಸಾರಿ ಸರ್, ಬಾಲ್ಯ ಬೇಡ ಸಿನಿಮಾ ಬಗ್ಗೆ ಬರೋಣ ಸಿನಿಮಾರಂಗಕ್ಕೆ ಬಂದು ಇಷ್ಟ ವರ್ಷ ಆಯ್ತು ನೀವು ಬಂದಿರುವ ದಿನಕ್ಕೂ ಈಗೂ ಇಂಡಸ್ಟ್ರಿ ಬದಲಾಗಿದೆ ಅನ್ಸಲ್ವಾ?**

ನೀವ್ ಹುಟ್ದಾಗ್ ಹೆಂಗಿದ್ರಿ ಹಾಗೇ ಇದೀರಾ? ಇಲ್ಲ ತಾನೆ? ಮೊದ್ಲು ನಿಮ್ಮಮ್ಮ ನೋಡ್ಕೋತಿದ್ರು... ನಂತ್ರ ನೀವೇ ನಡೆಯೋಕೆ ಕಲ್ತ್ರಿ ಸ್ಕೂಲಿಗೆ ಹೋದ್ರಿ... ದೊಡ್ಡೋರಾದ್ರಿ... ಈಗ ಯಾವ್ದೋ ಪೇಪರಲ್ಲಿ ಕೆಲ್ಸಕ್ಕೆ ಸೇರ್ಕೊಂಡಿದೀರಾ... ನಿಜ ತಾನೆ?

◆ **ಬಟ್, ಇಲ್ಲಿ ನಾನ್ ಕೇಳ್ತಿರೋದು.**

ಹಾ ಹಾ... ಇರಿ ಇರಿ... ಅಲ್ಲಿಗೇ ಬರ್ತಿದೀನಿ. ನೀವ್ ಕೇಳ್ತೀರಲ್ವಾ? ಕೇಳ್ತಿರೋ ಇಲ್ವ? ನೀವು ಜರ್ನಲಿಸ್ಟ್‌ಗಳು ಎಲ್ಲಿ ನಿಂತ್ಕೊಂಡು (ಒಂದೊಂದೇ ಕೈಬೆರಳು ಮಡಚುತ್ತಾ) ಸಮಯ, ಸಂದರ್ಭ, ಪರ್ಸನಲ್ಲಾ, ಪಬ್ಲಿಕ್ಕಾ, ಕೇಳ್ಬೇಕಾ, ಕೇಳ್ಬಾರ್ದಾ? ಏನೂ ನೋಡ್ದೆ ಎಲ್ಲೆಂದ್ರಲ್ಲಿ ಕ್ವಶ್ಚನ್ ಕೇಳ್ತೀರಲ್ವಾ? ಆಗೆಲ್ಲ ನಾವು ನಾರ್ಮಲ್ ಆಗಿ ಉತ್ರ ಕೊಡ್ತೀವಿ ತಾನೆ? ಅಷ್ಟೆಲ್ಲ ಕ್ವಶ್ಚನ್ ಕೇಳೋರಿಗೆ ನಂದೂ ಒಂದಿಷ್ಟು ಪ್ರಶ್ನೆಗಳನ್ನ ಕೇಳ್ತೀನಿ ನೀವು ಉತ್ರ ಕೊಡ್ಬೇಕು ತಾನೆ? ನಾನ್ ಹೇಳಿದ್ದು ಸರಿ ತಾನೆ? ನ್ಯಾಯ ನೀವೇ ಹೇಳಿ.

◆ **ಖಂಡಿತವಾಗ್ಲೂ ಕೇಳ್ಬೋದು, ಕೇಳಿ...**

ಇಲ್ಲ ಇಲ್ಲ... ನಾನ್ ಕೇಳಲ್ಲ... ಹೇಳ್ತೀನಿ ಇಂಡಸ್ಟ್ರೀ ಚೇಂಜ್ ಆಯ್ತಾ ಅಂತ ಕೇಳಿದ್ರಲ್ಲಾ ನೀವು? ಚೇಂಜ್ ಆಗೇ ಆಗತ್ತೆ ಮೊದ್ಲು ರೀಲ್ ಇತ್ತು ಈಗ ಡಿಜಿಟಲ್ ಆಗಿದೆ ಮೊದ್ಲು ಜನ್ರಿಗೆ ಪಿಚ್ಚರ್ ಬಿಟ್ರೆ ಬೇರೆ ಎಂಟರ್ಟೇನ್ಮೆಂಟ್ ಇರ್ಲಿಲ್ಲ ಒಬ್ಬ ಕೆಲಸ ಮುಗ್ಸಿ ಸಂಜೆ ಮನೆಗೆ ಬಂದ್ರೆ ಹೆಂಡ್ತಿ ಅವನನ್ನ ಪಿಚ್ಚರಿಗೆ ಕರ್ಕೊಂಡು ಹೋಗ್ತಿದ್ಲು ಈಗ? ಈಗ ಮೊಬೈಲ್... ಮೊಬೈಲೇ ದೊಡ್ಡ ಎಂಟರ್ಟೇನ್ಮೆಂಟ್ ಆಗಿದೆ... ದೊಡ್ಡ ಚಾಲೆಂಜ್ ಇದೆ.

◆ **ಹಾಗಾದ್ರೆ ಸಿನಿಮಾಗೆ ಜಾಸ್ತಿ ದಿನ ಉಳಿಗಾಲ ಇಲ್ಲ ಅಂತೀರಾ?**

ಉಳಿಗಾಲ ಇಲ್ದೆ ಎಲ್ ಹೋಗ್ತದೆ? ನಾವು ಅಡ್ಜಸ್ಟ್ ಮಾಡ್ಕೋಂಬೇಕಷ್ಟೆ ಟೀವಿ ಬಂದಾಗ್ಲೂ ಜನ, ಇನ್ ಥಿಯೇಟರ್‌ಗಳು ಉಳ್ಕೊಳಲ್ಲ ಅಂದ್ರು. ಎಲ್ಲಾ ಉಳ್ಕೊಂಡಿವೆ.

◆ **ಸುಮಾರು ಥಿಯೇಟರುಗಳು ಮುಚ್ಕೊಂಡೋಗಿವ್ಯಲ್ಲಾ ಸರ್..**

ಯಾಕ್ ಮುಚ್ಕೊಂಡ್ ಹೋಯ್ತು? ಅದ್ನೂ ಬರೀಬೇಕು ನೀವು. ನೀವು ಜರ್ನಲಿಸ್ಟ್‌ಗಳು ಯಾವಾಗ್ಲೂ ಒಂದ್ ಸೈಡೆಡ್ ಆಗ್ಬಾರ್ದು. ನೀವೊಂಥರ ನ್ಯಾಯದ ತಕ್ಕಡಿಯ ಮಿಡಲ್ ಒಂದು ಮುಳ್ ಇರತ್ತಲ್ಲಾ ಅಂಗೆ. ತಕ್ಡಿ ಖಾಲಿ ಇದ್ದಾಗ ಯಾವ ಕಡೆಗೂ ವಾಲ್ಬಾರ್ದು. ಯಾವ್ ಕಡೆ ವೇಟ್ ಇರತ್ತೋ ಆ ಕಡೆಗೆ ಅಷ್ಟೇ ಬಾಗ್ಬೇಕು ಅಷ್ಟೆ ತೂಕ ಸರಿ ಆಗ್ಬೇಕು ಅಂದ್ರೆ ಮುಳ್ಳು ಮುಳ್ಳು ಸರಿ ಇರ್ಬೇಕು. (ಅಷ್ಟರಲ್ಲಿ ಒಬ್ಬ ಹುಡುಗ ಬಂದು ದರ್ಶನ್ ಅವರ ಹಣೆ ಮೇಲೆ ಮೆದುಬಟ್ಟೆಯಲ್ಲಿ